# ಧರ್ಮಾಚರಣೆಯ ರಹಸ್ಯ

## ಪ್ರಾತಃ ಸ್ಮರಣೀಯ
## ಶ್ರೀ ವಿದ್ಯಾಮಾನ್ಯ ತೀರ್ಥರು

## ಭಾರತದೇಶ ಮತ್ತು ವಿದೇಶ

ಉಪನಯನಾದಿ ಸಂಸ್ಕಾರಗಳು,ವರ್ಣಾಶ್ರಮ ಧರ್ಮಗಳು ನಮ್ಮ ಭಾರತ ಭೂಮಿಯಲ್ಲಿ ಮಾತ್ರವೇ ಇವೆ.ಇತರ ಪಾಶ್ಚಾತ್ಯ ದೇಶಗಳಲ್ಲಿ ಇರುವದಿಲ್ಲ.ಆದರೂ ಆ ದೇಶದವರು ಸಂಪತ್ ಮುಂತಾದ ಸಮೃದ್ಧಿಗಳಿಂದ ನಮಗಿಂತಲೂ ಸುಖ ಪಡುತ್ತಾರೆ.ಈ ಭಾರತ ಭೂಮಿಯಲ್ಲಿ ವರ್ಣಾಶ್ರಮ ಧರ್ಮವಿದ್ದರೂ ಅಲ್ಲಿಯಂತೆ ಸಮೃದ್ಧಿಯೂ,ಸುಖವೂ ಕಾಣುವದಿಲ್ಲ.ಪ್ರಸ್ತುತ ನಾನು ಬ್ರಾಹ್ಮಣನು,ಎಲ್ಲರಿಗಿಂತಲೂ ನಾನು ಶ್ರೇಷ್ಠನಿದ್ದೇನೆಂಬ ಅಹಂಕಾರದಿಂದ ಪರಸ್ಪರ ಕಲಹ ಮಾಡುತ್ತಾ ಇತರರ ಅಪಹಾಸ್ಯಕ್ಕೆ ಭಾರತವು ಕಾರಣವಾಗಿದೆ. ಆದ್ದರಿಂದ ವರ್ಣಾಶ್ರಮ ಧರ್ಮದ ಆಚರಣೆಯನ್ನು ಬಿಟ್ಟುಪಾಶ್ಚಾತ್ಯಾದಿ ದೇಶಗಳಂತೆ ನಾವು ಐಕ್ಯದಿಂದ ದೇಶದ ಸಂಪತ್ತನ್ನು ಬೆಳೆಯಿಸಿಕೊಂಡು ಸುಖವಾಗಿ ಬಾಳೋಣ ಎಂದು ಈಗ ಎಲ್ಲ ಕಡೆಗಳಲ್ಲಿ ಮಾತುಗಳು ಕೇಳಿಬರುತ್ತಿವೆ.

ಆದರೆ ಈ ರೀತಿಯಾಗಿ ಹೇಳುವದು ಸರಿಯಾಗಿ ತಿಳಿದವರ ವಿಚಾರವಾಗಿರುವದಿಲ್ಲ.ಅರಣ್ಯಗಳಲ್ಲಿ,ಪರ್ವತಗಳಲ್ಲಿ ಶಿಖರಗಳಲ್ಲಿ ಮರಗಳು ನೀರು ಹಾಕದೇ ಇದ್ದರೂ ಎಷ್ಟು ಉತ್ತಮವಾಗಿ ಬೆಳೆಯುತ್ತವೆಂಬುದನ್ನೆಲ್ಲರೂ ಬಲ್ಲರು.ಆದರೆ ಮನೆ ಬಾಗಿಲುಗಳಲ್ಲಿ ನೀರುಹಾಕದೇನೇ ಆ ಮರಗಳನ್ನು,ಫಲ,ಪುಷ್ಪಾದಿಗಳನ್ನು ಬೆಳೆಯಿಸುತ್ತೇವೆಂದರೆ ಸಾಧ್ಯವಿಲ್ಲ.ಅದರಂತೆ ಇತರ ದೇಶಗಳು ಭೋಗ ಭೂಮಿಗಳಾಗಿವೆ.ನಮ್ಮ ಭಾರತ ಭೂಮಿಯು ಮಾತ್ರ ಕರ್ಮಭೂಮಿಯಾಗಿರುವದು.

ಭೋಗಭೂಮಿಗಿಂತಲೂ ಕರ್ಮಭೂಮಿಯು ಶ್ರೇಷ್ಠವಾದದ್ದು.ಭೋಗಭೂಮಿಯಲ್ಲಿ ಕರ್ಮದಿಂದ ಉತ್ಪತ್ತಿಯಾಗಿದ್ದ ಫಲವು ಕರಗುತ್ತಾ ಹೋಗುವದು.ಆದರೆ ಕರ್ಮಭೂಮಿಯಲ್ಲಿ ಮಾಡಿದ ಸತ್ಕರ್ಮಗಳಿಂದ ಪುಣ್ಯಾಂಶವು ಅಧಿಕವಾಗುತ್ತ ಪರುಷಾರ್ಥವಾದ ಮೋಕ್ಷವನ್ನು ಹೊಂದಲು ಸಾಧ್ಯಾವಾಗುತ್ತದೆ.ಆದ್ದರಿಂದ ಇಲ್ಲಿ ಧರ್ಮಾಚರಣೆ ಮಾಡದೆ ಸುಖ ಮತ್ತು ಶ್ರೇಯಸ್ಸು ಆಗುವುದಿಲ್ಲ.

ನಾವು ಮನೆ ಕಟ್ಟುವಾಗ ಅದರಲ್ಲಿ ಒಂದು ಭಾಗ ದೇವರ ಮನೆ ಎಂದು ಮಾಡುತ್ತೇವೆ.ಉಳಿದ ಭಾಗಗಳು,ಭೋಜನ ಶಾಲೆ,ಅಡಿಗೆ ಮನೆ,ಶಯನಕೋಣೆ  ಮುಂತಾದ ಉಪಯೋಗಕ್ಕಾಗಿ ಅನುಕೂಲವಾಗುವಂತೆ ಕಟ್ಟಿಸುತ್ತೇವೆ.ಹಾಗೆ ಪರಮಾತ್ಮನು ಈ ಬ್ರಹ್ಮಾಂಡವನ್ನು ಒಂದು ಮನೆಯನ್ನಾಗಿ ಸೃಷ್ಠಿ ಮಾಡಿ ಅದರಲ್ಲಿ ಈ ಭಾರತಭೂಮಿಯನ್ನು ನಮ್ಮ ಮನೆಗಳಲ್ಲಿ ದೇವರ ಕೋಣೆಯಂತೆ ಕರ್ಮಭೂಮಿಯನ್ನಾಗಿಯೂ ಇತರ ದೇಶಗಳನ್ನು ಭೋಗಭೂಮಿಯನ್ನಾಗಿಯೂ ಸೃಷ್ಠಿಸಿದ್ದಾನೆ.

ಈ ಭಾರತಭೂಮಿಯಲ್ಲಿ ಜನ್ಮವು ಬಹುಪುಣ್ಯ ಮಾಡಿದವರಿಗೆ ಲಭ್ಯವಾಗುತ್ತದೆ.ದೇವತೆಗಳು ಕೂಡ ಇಲ್ಲಿ ಜನ್ಮವನ್ನು ಹೊಂದಲು ಅಪೇಕ್ಷಿಸುತ್ತಾರೆ.ಪರಮಾತ್ಮನ ಅವತಾರಗಳು ಇಲ್ಲಿಯೇ ಆಗುತ್ತವೆ.ಗಂಗಾದಿ ಮಹಾನದಿಗಳು ಇಲ್ಲಿಯೇ ಇವೆ.ಹಿಂದಿನ ಕಾಲದಲ್ಲಿ ಅರಣ್ಯಗಳಲ್ಲಿ,ಪರ್ವತಗಳಲ್ಲಿ,ನದಿ ತಟಾಕಗಳಲ್ಲಿ ವಾಸ ಮಾಡಿಕೊಂಡು ಸರ್ವ ತ್ಯಾಗ ಮಾಡಿ ಬ್ರಹ್ಮ ಜ್ಞಾನಿಗಳಾದ ಮಹಾತ್ಮರು ಸಹಸ್ರಾರು ವರ್ಷಗಳವರೆಗೆ ತಪಸ್ಸು ಮಾಡಿದ ಇತಿಹಾಸವು ಇಲ್ಲಿಯೇ ಕಾಣುತ್ತದೆ.ಅಲ್ಲದೇ ಈ ಭಾರತಭೂಮಿಯಲ್ಲಿ ಅನಾದಿ ಕಾಲದಿಂದ ಮದ್ಯಮಾಂಸಾದಿಗಳು ತ್ಯಾಜ್ಯವೆಂದೆ ಪರಿಗಣಿಸಲ್ಪಟ್ಟಿವೆ.ಇಂತಹ ಶ್ರೇಷ್ಠವಾದ ಭಾರತಭೂಮಿಯಲ್ಲಿ ಬಹುಪುಣ್ಯ ಪ್ರಭಾವದಿಂದ ಜನ್ಮವನ್ನು ತಾಳಿದವನು ತನ್ನ ಜನ್ಮ ಸಾರ್ಥಕ್ಯಕ್ಕೋಸ್ಕರ ಇಲ್ಲಿಯೇ ಇದ್ದು ತನ್ನ ಶ್ರೇಯಸ್ಸನ್ನು ಸಾಧಿಸುವುದನ್ನು ಬಿಟ್ಟು ಪರದೇಶಕ್ಕೆ ಹೋಗಿ ಅಲ್ಲಿ ಇಚ್ಛಾನುಸಾರ ಕೆಲವು ಕಾಲ ಭೋಗಾಸಕ್ತನಾಗಿದ್ದು ಪುನಃ ಸ್ವದೇಶವಾದ ಈ ಭಾರತಭೂಮಿಗೆ ಬಂದವನಿಗೆ ಸಮಾಜವು ಬಹಿಷ್ಕಾರ ಹಾಕಲು ಇದೇ ಮುಖ್ಯ ಕಾರಣವಾಗಿದೆ.

ಈ ವಿಷಯವನ್ನು ಇನ್ನೂ ಒಂದು ದೃಷ್ಟಾಂತದಿಂದ ತಿಳಿದುಕೊಳ್ಳಬಹುದಾಗಿದೆ.ಒಬ್ಬನು ತನ್ನ ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಬಂದು ಸೇರುತ್ತಾನೆ.ಆದರೆ ಅವನು ಶಾಲೆ ಆರಂಭವಾಗುವ ಸಮಯಕ್ಕೆ ಬಾರದೆ ಸಿನಿಮಾಕ್ಕೋ,ಹೊಟೇಲಿಗೋ ಅಥವಾ ಪೇಟೇಗೋ ಹೋಗಿ ಹೊತ್ತಾಗಿ ಬಂದರೆ ಶಿಕ್ಷಕರು ಅವನನ್ನು ವರ್ಗದಲ್ಲಿ ಕೂಡಿಸಿಕೊಳ್ಳಲು ಅವಕಾಶವನ್ನೀಯುವುದಿಲ್ಲ.ಅವನನ್ನು ಬಹಿಷ್ಕರಿಸುತ್ತಾರೆ.ಹಾಗೆ ಈ ಶ್ರೇಷ್ಠವಾದ ಭಾರತ ಭೂಮಿಯಲ್ಲಿ ಶ್ರೇಯಸ್ಸಾಧನೆಗಾಗಿ ದೇವರಿಂದ ಜನ್ಮ ತಾಳಿದವನು ಇಲ್ಲಿ ಸಾಧನೆ ಮಾಡದೆ ಪರದೇಶಗಳಿಗೆ ಹೋಗಿ ಭೋಗಾಸಕ್ತನಾದರೆ ಅವನನ್ನು ಸಮಾಜದಿಂದ ಪೂರ್ವಜರು ಹೊರಗೆ ಹಾಕಿದರು.ಈಗಿನ ಕಾಲದಲ್ಲಿ ಧರ್ಮಾಚರಣೆ ಮಾಡದೆ ಈ ಭಾರತ ಭೂಮಿಯಲ್ಲಿದ್ದ ಕರ್ಮ ಹೀನರಿಗೂ ಈ ದೇಶದಿಂದ ಪರದೇಶಕ್ಕೆ ಹೋಗಿ ಬಂದವರಿಗೂ ಏನೂ ವ್ಯತ್ಯಾಸವು ಉಳಿದಿರುವುದಿಲ್ಲ.ಹೇಗೆಂದರೆ, ಶಾಲೆಯಲ್ಲಿ ಸರಿಯಾಗಿ ಹಾಜರಿ ಇದ್ದರೂ ಶಿಕ್ಷಕರು ಪಾಠ ಹೇಳುವಾಗ ಎಲ್ಲಿಯೋ ಮನಸ್ಸನ್ನಿಟ್ಟು ಅದನ್ನು ಸರಿಯಾಗಿ ಕೇಳದೇ ಇದ್ದ ವಿದ್ಯಾರ್ಥಿಗೂ ಅದೇ ಸಂದರ್ಭದಲ್ಲಿ ಶಾಲೆಗೆ ಬಾರದೆ ಆ ಹೊತ್ತಿನಲ್ಲಿ ಸಿನೇಮಾ ಇತ್ಯಾದಿಗಳಲ್ಲಿ ಮನಸ್ಸು ಹೋಗತಕ್ಕ ವಿದ್ಯಾರ್ಥಿಗೂ ಏನೂ ವ್ಯತ್ಯಾಸವಿಲ್ಲ.ಅದರಂತೆ ,ಈಗಿನ ಪರಿಸ್ಥಿಯಾಗಿದೆ.ಇಬ್ಬರೂ ಧರ್ಮವನ್ನು ಬಿಟ್ಟವರೇ ಆಗಿದ್ದಾರೆ.